ಅಸಲು ದಾವಾ.ನಂ. 68/2018
ಡಿ ಡಬ್ಲ್ಯೂ-2

ದಿನಾಂಕಃ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ ಶ್ರೀ ಎಂಜಿಕೆ ವಕೀಲರಿಂದ:</u>

ನನ್ನ ಅಜ್ಜನ ಹೆಸರು ಪಾರೀಶ ಭೈರನ್ನವರ. ನನ್ನ ಅಜ್ಜ ಸುಮಾರು 25 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಅಜ್ಜ 1993 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಸುಮಾರು 10-12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಅಜ್ಜನಿಗೆ ಒಟ್ಟು 5 ಜನ ಗಂಡು ಮಕ್ಕಳು ಮತ್ತು ಒಟ್ಟು 5 ಹೆಣ್ಣು ಮಕ್ಕಳು. ಗಂಡು ಮಕ್ಕಳ ಪೈಕಿ ನನ್ನ ತಂದೆ ಪಾಯಪ್ಪ ದೊಡ್ಡ ಮಗ, ನಂತರ ಜಿನ್ನಪ್ಪ, ಬಾಹುಬಲಿ, ಭುಜಬಲಿ ಮತ್ತು ಮಹಾವೀರ. ನನ್ನ ತಂದೆ 2019 ಜುಲೈ ನಲ್ಲಿ ಮೃತಪಟ್ಟಿರುತ್ತಾರೆ. ಜಿನ್ನಪ್ಪ ಜೀವಂತ ಇರುತ್ತಾರೆ. ಭುಜಬಲಿ ಇವರು 1987 ರಲ್ಲಿ ಮೃತಪಟ್ಟಿರುತ್ತಾರೆ. ಬಾಬಹುಲಿ ಮತ್ತು ಮಹಾವೀರ ಜೀವಂತ ಇರುತ್ತಾರೆ. ಭುಜಬಲಿ ಇವರ ಹೆಂಡತಿ 1 ನೇ ವಾದಿ ಎಂದರೆ ಸರಿ, 2 ನೇ ವಾದಿ ಅವರ ಮಗಳು ಎಂದರೆ ಸರಿ. ಭುಜಬಲಿ ಮೃತಪಟ್ಟಾಗಿ 2 ನೇ ವಾದಿಯ ವಯಸ್ಸು 3 ವರ್ಷ ಇತ್ತು ಎಂದರೆ ಸರಿ. 2 ನೇ ವಾದಿ 1984 ರಲ್ಲಿ ಜನಿಸಿರುತ್ತಾಳೆ ಎಂದರೆ ಸರಿ.

ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಶೇಗುಣಸಿ ಮತ್ತು ಹಳಿಂಗಳಿ ಗ್ರಾಮದಲ್ಲಿ ಇರುತ್ತವೆ. ಹಳಿಂಗಳಿ ಗ್ರಾಮದಲ್ಲಿ ನಮಗೆ ಇರುವ ಜಮೀನು ಸರ್ವೆ ನಂ.36/1 ಕ್ಷೇತ್ರ 3 ಎಕರೆ 15 ಗುಂಟೆ ಮತ್ತು ಸರ್ವೆ ನಂ.40/24 ಕ್ಷೇತ್ರ 04 ಗುಂಟೆ. ಜಮೀನು ಸರ್ವೆ ನಂ.87/1 ಮತ್ತು 91/8 ಕರ್ನಾಟಕ ನೀರಾವರಿ ನಿಗಮದವರು ವಶಪಡಿಸಿಕೊಂಡಿರುವುದಾಗಿ ಹೇಳುತ್ತಾರೆ. ಹಳಿಂಗಳಿ ಗ್ರಾಮದ ಎಲ್ಲಾ ಆಸ್ತಿಗಳು ನಮ್ಮ ಪಿತಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ನನ್ನ ತಂದೆ, ಅಜ್ಜ ಅಥವಾ ನನ್ನ ತಂದೆಯ ಸಹೋದರರು ಖರೀದಿಸಿದ ಆಸ್ತಿಗಳಲ್ಲ ಎಂದರೆ ಸರಿ. ಹಳಿಂಗಳಿ ಗ್ರಾಮದ ಆಸ್ತಿಗಳನ್ನು ನನ್ನ ಅಜ್ಜ ಜೀವಂತನ ಕಾಲದಲ್ಲಿ ಸಾಗುವಳಿ ಮಾಡುತ್ತಿದ್ದರು. ನನ್ನ ಅಜ್ಜ ಮೃತಪಟ್ಟ ನಂತರ ನನ್ನ ತಂದೆ ನಮ್ಮ ಕುಟುಂಬದ ಕರ್ತ ಎಂದು ಆಸ್ತಿಗಳನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ಕುಟುಂಬದ ಕರ್ತ ಎಂದು ಆಸ್ತಿಗಳನ್ನು ನೋಡಿಕೊಂಡು ಹೋಗುವಾಗ ವಾದಿಯ ಗಂಡ ಭುಜಬಲಿ ಮೃತಪಟ್ಟಿದ್ದ ಎಂದರೆ ಸರಿ. ಆ ಸಮಯದಲ್ಲಿ 2 ನೇ ವಾದಿ ಅಪ್ರಾಪ್ತ ವಯಸ್ಕಳಾಗಿದ್ದಳು ಎಂದರೆ ಸರಿ. ಹಳಿಂಗಳಿ ಗ್ರಾಮದ ಎಲ್ಲಾ ಆಸ್ತಿಗಳನ್ನು ಭುಜಬಲಿ ಇವರ ಪಾಲಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

1 ನೇ ವಾದಿ ಹೆಣ್ಣು ಮಗಳು ಇರುವುದರಿಂದ ಮತ್ತು 2 ನೇ ಅಪ್ರಾಪ್ತ ಬಾಲಕಿ ಇರುವುದರಿಂದ ಸದರಿ ಆಸ್ತಿಗಳನ್ನು ನನ್ನ ತಂದೆಗೆ ನೋಡಿಕೊಂಡು ಹೋಗಲು ಕೊಟ್ಟಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ವಾದಿಯರು ತವರು ಮನೆಗೆ ಹೋಗಿರುವುದರಿಂದ ನನ್ನ ತಂದೆ ಸಾಗುವಳಿ ಮಾಡುತ್ತಾ ಬಂದಿರುವುದಾಗಿ ಹೇಳುತ್ತಾರೆ. ವಾದಿ ತನ್ನ ತವರು ಮನೆಗೆ ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ವಾದಿ ಪ್ರಾಪ್ತ ವಯಸ್ಕಳಾದ ನಂತರ ಸದರಿ ಆಸ್ತಿಗಳನ್ನು ಮರಳಿ ಕೊಡಬೇಕೆಂದು ಹಿರಿಯರ ಸಮಕ್ಷಮ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಅದರಂತೆ 2 ನೇ ವಾದಿ ವಯಸ್ಕಳಾದ ನಂತರ ನನ್ನ ತಂದೆ ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲಕ ಸದರಿ ಎಲ್ಲಾ ಆಸ್ತಿಗಳನ್ನು ವರ್ಗಾವಣೆ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಅದರಂತೆ ನಿಪಿ-30 ರಂತೆ ದಾಖಲೆ ಬರೆದುಕೊಟ್ಟು ಅದಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-30 ಕ್ಕೆ ಸೇರಿದಂತೆ, ನಿಪಿ-29 ರಂತೆ ನನ್ನ ತಂದೆ ರೂ.1000/- ಮುದ್ರಾಂಕ ಶುಲ್ಕ ಪಾವತಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-29 ಮತ್ತು 30 ರಂತೆ ವರದಿ ಕೊಟ್ಟ ನಂತರ ನನ್ನ ತಂದೆಗೆ ಕಂದಾಯ ಇಲಾಖೆಯವರು ನೋಟಿಸ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಯಾವುದೇ ತಕರಾರು ಮಾಡಿಲ್ಲ, ಕಾರಣ ಕಂದಾಯ ಅಧಿಕಾರಿಗಳು ಎಂ.ಆರ್. ನಂ.62/2008-09 ನೇದ್ದನ್ನು ದಿನಾಂಕಃ 06-07-2009 ರಂದು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಅದೇ ದಿನ ನನ್ನ ತಂದೆ ಆಸ್ತಿಗಳ ಸ್ವಾಧೀನತೆಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕದಿಂದ ಇವತ್ತಿನವರೆಗೆ ಸದರಿ ಆಸ್ತಿಗಳಲ್ಲಿ ವಾದಿಯರೇ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿ. ಪಹಣಿ ಪತ್ರಿಕೆಗಳಲ್ಲಿ ವಾದಿಯರ ಹೆಸರು ಇವತ್ತಿನವರೆಗೊ ವಾದಿಯರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ ಹೆಸರಿನಲ್ಲಿ ದಾಖಲೆಗಳು ಇವೆ, ಆದರೆ ವಾದಿಯರೇ ಸಾಗುವಳಿ ಮಾಡುತ್ತಾರೆ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳಲ್ಲಿ ವಾದಿಯರೇ ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಆ ಬಗ್ಗೆ ವಾದಿಯರು ನಿಪಿ-46 ರಿಂದ 57 ರವರೆಗೆ ರಶೀದಿಗಳನ್ನು ಹಾಜರಪಡಿಸಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ವಾದಿಯರೇ ಮಾಲೀಕತ್ವ ಹೊಂದಿರುವುದರಿಂದ ಅವುಗಳಲ್ಲಿ ಕಬ್ಬು ಬೆಳೆದು ಸಕ್ಕರೆ ಕಾರ್ಖಾನೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗಳು ಹಿಪ್ಪರಗಿ ಆಣೆಕಟ್ಟೆಗೆ ಸ್ವಾಧೀನ

ಪಡಿಸಿಕೊಂಡಿರುವ ಪರಿಹಾರದ ಹಣ ರೂ.4,00,000/- ನ್ನು ನನ್ನ ತಂದೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಎರಡು ದಾಖಲೆಗಳು ತೋರಿಸಿ, ಅವು ನನ್ನ ತಂದೆಯ ಹೆಸರಿನಲ್ಲಿ ಗುರುತಿಸಿರುವುದರಿಂದ ನಿಪಿ-68 ಮತ್ತು 69 ಎಂದು ಗುರುತಿಸಲಾಯಿತು. ಸದರಿ ಆಸ್ತಿಗಳ ಮೇಲೆ ನನ್ನ ತಂದೆ ಬ್ಯಾಂಕಿನಲ್ಲಿ ಸಾಲ ತೆಗೆದು ಭೋಜಾ ಹಾಕಿಸಿರುತ್ತಾರೆ ಎಂದರೆ ಸರಿ. ಸದರಿ ಸಾಲದ ಹಣವನ್ನು ನನ್ನ ತಂದೆಯೇ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಪರವಾಗಿ ಪಡೆದು ಖರ್ಚು ಮಾಡಿರುವುದಾಗಿ ಹೇಳುತ್ತಾರೆ. ಈ ದಾವೆ ಸಲ್ಲಿಸುವ ನಾನು ಸಹಾಯಕ ಆಯುಕ್ತರ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದೆನು ಎಂದರೆ ಸರಿ. ಸಹಾಯಕ ಆಯುಕ್ತರು ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳುವಂತೆ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಆ ಕಾರಣಕ್ಕಾಗಿ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.

ಅಥಣಿ ತಾಲೂಕಿನ ಶೇಗುಣಸಿ ಗ್ರಾಮದಲ್ಲಿ 18 ಎಕರೆ ಜಮೀನು ಇರುತ್ತದೆ. ಸದರಿ 18 ಎಕರೆ ನನ್ನ ಅಜ್ಜನಿಗೆ ಗೇಣಿ ಮೂಲಕ ಬಂದಿರುತ್ತದೆ. ಸದರಿ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಕೊಟ್ಟಿಲ್ಲ ಎಂದರೆ ಸರಿ. ಹಳಿಂಗಳಿ ಗ್ರಾಮದ ಜಮೀನುಗಳು 1ನೇ ವಾದಿಯ ಗಂಡನ ಪಾಲಿಗೆ ಕೊಟ್ಟಿರುವುದರಿಂದ ಶೇಗಣುಸಿ ಗ್ರಾಮದಲ್ಲಿ ಇರುವ ಜಮೀನುಗಳಲ್ಲಿ ಪಾಲು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶೇಗುಣಸಿ ಗ್ರಾಮದ ಆಸ್ತಿಗಳಲ್ಲಿ ಭುಜಬಲಿ ಇವರನ್ನು ಹೊರತುಪಡಿಸಿ, ನನ್ನ ತಂದೆ ಹಾಗೂ ಅವರ ಇತರ ಸಹೋದರರು ವಿಭಾಗ ಮಾಡಿಕೊಂಡಿದ್ದು, ಅದರಲ್ಲಿ ತಲಾ 4 ಎಕರೆ 19 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಹಳಿಂಗಳಿ ಗ್ರಾಮದ ಜಮೀನು ಒಟ್ಟು ಕ್ಷೇತ್ರ 4 ಎಕರೆ 20 ಗುಂಟೆ ಇದೆ ಎಂದರೆ ಸರಿಯಲ್ಲ. ನನ್ನ ಅಜ್ಜ ತನ್ನ ಜೀವಿತ ಕಾಲದಲ್ಲಿ ತನ್ನ 5 ಜನ ಮಕ್ಕಳಲ್ಲಿ, ಹಳಿಂಗಳಿ ಗ್ರಾಮದ ಜಮೀನುಗಳು ಭುಜಬಲಿ ಮತ್ತು ಶೇಗುಣಸಿ ಗ್ರಾಮದ ಜಮೀನುಗಳನ್ನು ಇತರ ನಾಲ್ಕು ಜನ ಮಕ್ಕಳಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಹೆಣ್ಣು ಮಕ್ಕಳು ಇರುವುದರಿಂದ ಅವರಿಗೆ ಆಸ್ತಿಗಳಲ್ಲಿ ಪಾಲು ಕೊಡಬಾರದೆಂಬ ದುರುದ್ದೇಶದಿಂದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.09 15:58:34 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ